KACD220045282025

Presented on : 26-12-2025
Registered on : 26-12-2025
Decided on : 02-04-2026
Duration : 06D-03M-00Y

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಚಳ್ಳಕೆರೆ.

ಉಪಸ್ಥಿತರುಃ ಶ್ರೀಮತಿ ಹೇಮಾ ಹೆಚ್.ಆರ್.,

ಬಿ.ಎ. ಎಲ್, ಎಲ್‌ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.

ದಿನಾಂಕ 02 ನೇ ಏಪ್ರಿಲ್ 2026

**ಸಿ.ಸಿ.ನಂ.2459/2025**

ಪಿರ್ಯಾದಿದಾರರುಃ

ಸರ್ಕಾರದ ಪರವಾಗಿ ಚಳ್ಳಕೆರೆ ಪೊಲೀಸ್.

(ಸಹಾಯ ಸರ್ಕಾರಿ ಅಭಿಯೋಜಕರು)

–ವಿರುದ್ಧ –

ಆರೋಪಿತರು ಃ–

1. ಮೊಹಮ್ಮದ್ ಶರೀಫ್ ಬಿನ್ ಪೀರನ್ ಸಾಬ್,
ಸು.೩೫ ವರ್ಷ, ಉರ್ದು ಶಾಲೆಯ ಹಿಂದೆ,
ಆಜಾದ್‌ನಗರ, ಹಿರಿಯೂರು ಪಟ್ಟಣ, ಚಿತ್ರದುರ್ಗ.

(ಶ್ರೀಮತಿ ಬಿ.ಗೀತಾಂಜಲಿ, ವಕೀಲರು)

| | | |
|---|---|---|
| 1. ಅಪರಾಧ ಜರುಗಿದ ದಿನಾಂಕ | ಃ | 20.07.2025 |
| 2. ಅಪರಾಧವನ್ನು ವರದಿ ಮಾಡಿದ ದಿನಾಂಕ | ಃ | 04.10.2025 |
| 3. ಆರೋಪಿತರನ್ನು ಬಂಧಿಸಿದ ದಿನಾಂಕ | ಃ | 07.02.2026 |

| | | |
|---|---|---|
| 4. ಪಿರ್ಯಾದುದಾರರ ಹೆಸರು | : | ವೆಂಕಟೇಶ |
| 5. ವಿಚಾರಣೆ ಪ್ರಾರಂಭವಾದ ದಿನಾಂಕ | : | 07.02.2026 |
| 6. ವಿಚಾರಣೆ ಮುಕ್ತಾಯವಾದ ದಿನಾಂಕ | : | 25.02.2026 |
| 7. ಆಪಾದನೆಗಳು | : | ಭಾರತೀಯ ನ್ಯಾಯ ಸಂಹಿತೆ ಕಲಂ 303(2) |
| 8. ನ್ಯಾಯಾಧೀಶರ ಅಭಿಪ್ರಾಯ | : | ನಿರ್ದೋಷಿ ಎಂದು ಪರಿಗಣಿಸಿದೆ. |

## ತೀರ್ಪು

ಚಳ್ಳಕೆರೆ ಪೊಲೀಸ್ ಠಾಣೆಯ ಉಪನಿರೀಕ್ಷಕರು ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ ೩೦೩(೨) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ.

ಅಭಿಯೋಜನೆ ಮೊಕದ್ದಮೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ-

2. ದಿನಾಂಕ ೨೦.೦೭.೨೦೨೫ ರಂದು ಬೆಳಿಗ್ಗೆ ೮.೩೦ ಗಂಟೆಗೆ ಚಾಸಾ.೧ ರವರು ಚಿತ್ರನಾಯಕನಹಳ್ಳಿ ಗ್ರಾಮದಿಂದ ಕೆಎ.೧೬/ಈ.ಎ.೫೪೮೦ ನೇ ಮೋಟಾರ್ ಸೈಕಲ್‌ನಲ್ಲಿ ಹೊರಟು ಬೆಳಿಗ್ಗೆ ೯.೦೦ ಗಂಟೆಗೆ ಚಳ್ಳಕೆರೆಗೆ ಬಂದು, ಚಳ್ಳಕೆರೆ ಪಟ್ಟಣದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಮೋಟಾರ್ ಸೈಕಲ್‌ನ್ನು ನಿಲ್ಲಿಸಿ, ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ಹಿರಿಯೂರು ಮುಖಾಂತರ ಹೊಸದುರ್ಗಕ್ಕೆ ಹೋಗಿ, ನಂತರ ಸಂಜೆ ೬.೦೦ ಗಂಟೆಗೆ ಚಳ್ಳಕೆರೆಗೆ ವಾಪಸ್ ಬಂದು, ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ನೋಡಿದಾಗ ಕೆಎ.೧೬/ಈ.ಎ.೫೪೮೦ ನೇ ಮೋಟಾರ್ ಸೈಕಲ್ ಇರುವುದಿಲ್ಲ. ನಂತರ ಬಸ್ ನಿಲ್ದಾಣದ ಸುತ್ತಾಮುತ್ತಾ ಮತ್ತು ಚಳ್ಳಕೆರೆ ಪಟ್ಟಣದ ವಿವಿದ ಕಡೆಗಳಲ್ಲಿ ಹುಡುಕಾಡಲಾಗಿ ಎಲ್ಲಿಯೂ ಮೋಟಾರ್ ಸೈಕಲ್ ಕಂಡುಬಂದಿರುವುದಿಲ್ಲ. ಅದೇ ದಿನ ಮದ್ಯಾಹ್ನ ೩.೦೦ ಗಂಟೆ ಸಮಯದಲ್ಲಿ ಆರೋಪಿಯು ಸದರಿ ಮೋಟಾರ್ ಸೈಕಲ್‌ನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ. ಆ ಮೂಲಕ ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ ೩೦೩(೨) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ.

3. ಆ ಬಗ್ಗೆ ದಿನಾಂಕ:೦೪.೧೧.೨೦೨೫ ರಂದು ಚಾಸಾ.೧ ರವರು ಚಾಸಾ-೧೧ ರವರಿಗೆ ದೂರನ್ನು ನೀಡಿರುತ್ತಾರೆ. ಚಾಸಾ-೧೧ ರವರು ಸದರಿ ದೂರಿನ ಆಧಾರದ ಮೇಲೆ ಠಾಣಾ ಮೊಕದ್ದಮೆ ನಂ:೪೩೭/೨೦೨೫ ನ್ನು ದಾಖಲಿಸಿರುತ್ತಾರೆ ಮತ್ತು ಪ್ರಥಮ ವರ್ತಮಾನ ವರದಿಯನ್ನು ಅಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟ್ ರವರಿಗೆ ಹಾಗೂ ತಮ್ಮ ಮೇಲಾಧಿಕಾರಿಗಳಿಗೆ ನಿವೇದಿಸಿ

ಕೊಂಡಿರುತ್ತಾರೆ. ತನಿಖಾಧಿಕಾರಿಗಳು ಸದರಿ ದೂರಿನ ಅನ್ವಯ ತನಿಖಾ ಕಾರ್ಯ ಪೂರ್ಣಗೊಳಿಸಿ, ಆರೋಪಿಯ ವಿರುದ್ಧ ಮೇಲೆ ತಿಳಿಸಿದ ಅಪರಾಧಗಳಿಗೆ ನ್ಯಾಯಿಕ ದೋಷರೋಪಣಾಪಟ್ಟಿ ಸಲ್ಲಿಸಿದ್ದು, ನ್ಯಾಯಾಲಯವು ಭಾರತೀಯ ನ್ಯಾಯ ಸಂಹಿತೆ ಕಲಂ ೩೦೩(೨) ರಡಿಯಲ್ಲಿ ಅಪರಾಧಿಕ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು.

4. ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿದ ನಂತರ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿದ್ದು, ದಿನಾಂಕ ೦೭.೦೨.೨೦೨೬ ರ ಆದೇಶದಂತೆ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಆದೇಶವಾಗಿದ್ದರೂ ಸಹ ಆರೋಪಿಯು ಸೂಕ್ತ ಜಾಮೀನನ್ನು ಒದಗಿಸದ ಕಾರಣ ಅವರನ್ನು ನ್ಯಾಯಾಂಗ ಬಂಧನದಲ್ಲಿಡಲಾಗಿರುತ್ತದೆ. ಭಾರತೀಯ ನಾಗರೀಕ ಸುರಕ್ಷ ಸಂಹಿತೆ ಕಲಂ.೨೩೦ ರ ಪ್ರಕಾರ ಆರೋಪಿತರಿಗೆ ಈ ಪ್ರಕರಣದ ಅಂತಿಮ ವರದಿ ಮತ್ತು ಅದರ ಜೊತೆ ಲಗತ್ತಿಸಿದ ದಾಖಲುಗಳನ್ನು ವಿತರಿಸಲಾಯಿತು. ಆರೋಪಿತರ ಪರ ವಕೀಲರು ಮತ್ತು ಸ.ಸ.ಅ. ರವರ ವಾದವನ್ನು ಆಲಿಸಿದ ನಂತರ ಭಾರತೀಯ ನ್ಯಾಯ ಸಂಹಿತೆ ಕಲಂ ೩೦೩(೨) ರಡಿಯಲ್ಲಿ ದೋಷಾರೋಪಣೆಯನ್ನು ಸಿದ್ದಪಡಿಸಿ ಆರೋಪಿತರಿಗೆ ಓದಿ ಹೇಳಿ ತಾವು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ವಿಚಾರಣೆಯಾಗಬೇಕೆಂದು ಕೋರಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತರ ಮೇಲಿನ ಆರೋಪಣೆಗಳನ್ನು ರುಜುವಾತು ಪಡಿಸುವ ಸಲುವಾಗಿ ಒಟ್ಟು ೮ ಸಾಕ್ಷಿದಾರರನ್ನು ಪ್ರಾಸಾ–೧ ರಿಂದ ೮ ರಂತೆ ವಿಚಾರಣೆಗೊಳಪಡಿಸಿ ನಿಪಿ–೧ ರಿಂದ ೧೦ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು. ಅಭಿಯೋಜನೆಯ ಪರವಾಗಿ ಸಾಕ್ಷಿ ವಿಚಾರಣೆ ಮುಗಿದ ನಂತರ ಆರೋಪಿತರಿಗೆ ವ್ಯತಿರಿಕ್ತವಾದ ಸಾಕ್ಷ್ಯಗಳು ಇರುವ ಕಾರಣ, ಭಾರತೀಯ ನಾಗರೀಕ ಸುರಕ್ಷ ಸಂಹಿತೆ ಕಲಂ ೩೫೧ ರಡಿಯಲ್ಲಿ ಆರೋಪಿತರ ಹೇಳಿಕೆಗಳನ್ನು ಮಾಡಿದ್ದು, ಅದರಲ್ಲಿ ಆರೋಪಿತರು ಅಭಿಯೋಜನೆಯ ಪರ ಸಾಕ್ಷಿದಾರರು ಆರೋಪಿತರ ವಿರುದ್ದವಾಗಿ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ತಮ್ಮ ಪರ ಸಾಕ್ಷ್ಯ ಇಲ್ಲವೆಂದು ನುಡಿದಿದ್ದರಿಂದ ಈ ಪ್ರಕರಣವನ್ನು ವಾದಕ್ಕೆ ಮುಂದೂಡಲಾಯಿತು.

6. ಉಭಯ ಪಕ್ಷಗಾರರ ವಾದಗಳನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

7. ಅಭಿಯೋಜನ ಪಕ್ಷದವರು ಆರೋಪಿತರ ವಿರುದ್ದ ಮಾಡಿರುವ ಆರೋಪಗಳ ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

(೧) ದಿನಾಂಕ ೨೦.೦೭.೨೦೨೫ ರಂದು ಮಧ್ಯಾಹ್ನ ೩.೦೦ ಗಂಟೆ ಸಮಯದಲ್ಲಿ ಚಳ್ಳಕೆರೆ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಳ್ಳಕೆರೆ ಪಟ್ಟಣದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಆವರಣದಲ್ಲಿ ಆರೋಪಿಯು ಚಾಸಾ.೧ ರವರ ಕೆಎ.೧೬/ಈ.ಎ.೫೪೮೦ ನೇ ಮೋಟಾರ್ ಸೈಕಲ್‌ನ್ನು ಕಳವು ಮಾಡಿದ್ದರಿಂದ, ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ ೩೦೩(೨) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(೨) ಯಾವ ಆದೇಶ?

**8.** ಈ ಮೇಲಿನ ಅಂಶಗಳಿಗೆ ನ್ಯಾಯಾಲಯ ಈ ಕೆಳಕಂಡಂತೆ ಉತ್ತರಿಸುತ್ತದೆಃ–

ಅಂಶ ನಂ.೧ ಃ ನಕಾರಾತ್ಮಕವಾಗಿ,

ಅಂಶ ನಂ.೨ ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

## ಕಾರಣಗಳು

9. ಅಂಶ ನಂ.೧ – ಈ ಪ್ರಕರಣದಲ್ಲಿ ಆರೋಪಿತರ ಮೇಲೆ ಮಾಡಲಾದ ಆಪಾದನೆಗಳನ್ನು ನಿರೂಪಿಸಲು ಅಭಿಯೋಜನಾ ಪಕ್ಷದವರು ದೂರುದಾರರಾದ ಚಾಸಾ.೧ ರವರನ್ನು ಪ್ರಾಸಾ.೧ ಎಂದು, ಮಹಜರ್ ಸಾಕ್ಷಿದಾರರಾದ ಚಾಸಾ.೪, ೫ ಮತ್ತು ೩ ರವರನ್ನು ಕ್ರಮವಾಗಿ ಪ್ರಾಸಾ.೨ ರಿಂದ ೪ ಎಂದು, ಪೋಲೀಸ್ ಸಿಬ್ಬಂಧಿಯಾದ ಚಾಸಾ.೮ ರವರನ್ನು ಪ್ರಾಸಾ.೫ ಎಂದು, ತನಿಖಾಧಿಕಾರಿಯಾದ ಚಾಸಾ.೧೧ ರವರನ್ನು ಪ್ರಾಸಾ.೬ ಎಂದು, ತನಿಖಾಧಿಕಾರಿಯಾದ ಚಾಸಾ.೧೨ ರವರನ್ನು ಪ್ರಾಸಾ.೭ ಎಂದು, ಸಾಂದರ್ಭಿಕ ಮತ್ತು ಮಹಜರ್ ಸಾಕ್ಷಿದಾರರಾದ ಚಾಸಾ.೬ ರವರನ್ನು ಪ್ರಾಸಾ.೮ ಎಂದು ವಿಚಾರಣೆಗೊಳಪಡಿಸಿರುತ್ತಾರೆ.

10. ಈ ಪ್ರಕರಣದಲ್ಲಿ ದೂರುದಾರರಾದ ಪ್ರಾಸಾ.೧ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೨೦.೦೭.೨೦೨೫ ರಂದು ಹೊಸದುರ್ಗಕ್ಕೆ ಹೋಗಬೇಕಾಗಿದ್ದರಿಂದ ಚಿತ್ರನಾಯಕನಹಳ್ಳಿಯಿಂದ ಕೆಎ.೧೬/ಇ.ಎ.೫೪೮೦ ರ ವಾಹನದಲ್ಲಿ ಬಂದು ಬೆಳಿಗ್ಗೆ ೯.೦೦ ಗಂಟೆಗೆ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಪಕ್ಕದಲ್ಲಿ ವಾಹನವನ್ನು ನಿಲ್ಲಿಸಿ, ಹೊಸದುರ್ಗಕ್ಕೆ ಹೋಗಿದ್ದು, ವಾಪಸ್ ಸಂಜೆ ೬.೦೦ ಗಂಟೆಗೆ ಬಂದು ನೋಡಿದಾಗ ಸ್ಥಳದಲ್ಲಿ ಬೈಕ್ ಇರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಆ ಬಗ್ಗೆ ದೂರು ನೀಡಿದ್ದು, ೩–೪ ತಿಂಗಳುಗಳ ನಂತರ ಕಳ್ಳತನವಾಗಿದ್ದ ಬೈಕ್ ಆರೋಪಿಯ ಬಳಿ ಸಿಕ್ಕಿರುತ್ತದೆ ಎಂದು ಪೋಲೀಸರಿಂದ ಮಾಹಿತಿ ತಿಳಿದು,

ಠಾಣೆಗೆ ಹೋಗಿ ಪೋಲೀಸರ ವಶದಿಂದ ಬೈಕನ್ನು ಬಿಡಿಸಿಕೊಂಡಿರುವುದಾಗಿ ನುಡಿಯುತ್ತಾರೆ. ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗೆ ಒಳಪಡಿಸಿದ್ದು, ಸಾಕ್ಷಿಯು ದಿನಾಂಕ ೦೭.೧೦.೨೦೨೫ ರಂದು ಪೋಲೀಸರು ಕಳ್ಳ ಸಿಕ್ಕಿರುವ ವಿಚಾರ ತಿಳಿಸಿದ್ದು, ಠಾಣೆಗೆ ಹೋದಾಗ ಆರೋಪಿ ಮತ್ತು ಬೈಕನ್ನು ತೋರಿಸಿದ್ದು, ಆರೋಪಿಯು ತಾನು ಬೈಕನ್ನು ಕಳ್ಳತನ ಮಾಡಿದ್ದಾಗಿ ತಿಳಿಸಿರುತ್ತಾನೆ ಎಂದು ನುಡಿಯುತ್ತಾರೆ.

11. ಮಹಜರ್ ಸಾಕ್ಷಿದಾರರಾದ ಪ್ರಾಸಾ.೨ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೦೫.೧೦.೨೦೨೫ ರಂದು ನಿ.ಪಿ.೫–ಸ್ಥಳ ಪಂಚನಾಮೆಗೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುವುದಾಗಿ, ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ, ನಂತರ ದಿನಾಂಕ ೦೬.೧೦.೨೦೨೫ ರಂದು ಪೋಲೀಸ್ ಠಾಣೆಯಲ್ಲಿ ಪೋಲೀಸರು ಆರೋಪಿ ಸಮಕ್ಷಮ ಮದ್ಯಾಹ್ನ ೨.೦೦ ರಿಂದ ೨.೩೦ ರವರೆಗೆ ಮಹಜರ್ ಜರುಗಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸಾಕ್ಷಿಯು ಆರೋಪಿಯು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಪಕ್ಕ ಕಳ್ಳತನ ಮಾಡಿದ ಜಾಗವನ್ನು ತೋರಿಸಿದ ಮೇರೆಗೆ ಮದ್ಯಾಹ್ನ ೩.೪೫ ರಿಂದ ೪.೧೦ ರವರೆಗೆ ಮಹಜರ್ ಕ್ರಮ ಜರುಗಿಸಿದ್ದು, ನಂತರ ದಿನಾಂಕ ೦೭.೧೦.೨೦೨೫ ರಂದು ಮಹಜರ್ ಕ್ರಮ ಜರುಗಿಸಿ ಕೆಎ.೧೬/ಇಎ.೫೪೮೦ ನೇ ವಾಹನವನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಅಭಿಯೋಜಕರ ಪಾಟೀ ಸವಾಲಿನಲ್ಲಿ ಬೈಕನ್ನು ಚಾಸಾ.೬ ರವರಿಗೆ ಆರೋಪಿಯು ಮಾರಾಟ ಮಾಡಿದ್ದು, ಚಾಸಾ.೬ ರವರು ಠಾಣೆಗೆ ತಂದು ಹಾಜರುಪಡಿಸಿ, ಬೈಕನ್ನು ಆರೋಪಿಯಿಂದ ಖರೀದಿಸಿದ್ದಾಗಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

12. ಮಹಜರ್ ಸಾಕ್ಷಿದಾರರಾದ ಪ್ರಾಸಾ.೩ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೦೫.೧೦.೨೦೨೫ ರಂದು ಪೋಲೀಸ್ ಠಾಣೆಯಲ್ಲಿ ನಿ.ಪಿ.೫–ಸ್ಥಳ ಪಂಚನಾಮೆಗೆ ಸಹಿ ಮಾಡಿದ್ದು, ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ, ಪೋಲೀಸರು ತನ್ನನ್ನು ಎಲ್ಲಿಯೂ ಕರೆದುಕೊಂಡು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ದಿನಾಂಕ ೦೮.೧೦.೨೦೨೫ ರಂದು ಪೋಲಿಸ್ ಠಾಣೆಯಲ್ಲಿ ಪೋಲಿಸರು ಆರೋಪಿಯ ಸಮಕ್ಷಮ ೪.೦೦ ರಿಂದ ೪.೩೦ ರವರೆಗೆ ಮಹಜರ್ ಕ್ರಮ ಜರುಗಿಸಿ ಕಳ್ಳತನವಾದ ಬೈಕನ್ನು ಜಪ್ತುಪಡಿಸಿಕೊಂಡು ಮಹಜರ್ ಜರುಗಿಸಿರುವುದಾಗಿ ನುಡಿಯುತ್ತಾರೆ. ಸಾಕ್ಷಿಯು ಅಭಿಯೋಜಕರ ಪಾಟೀ ಸವಾಲಿನಲ್ಲಿ ದಿನಾಂಕ ೦೫.೧೦.೨೦೨೫ ರಂದು ಆರೋಪಿಯು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಪಕ್ಕ ಕಳ್ಳತನ ಮಾಡಿದ ಜಾಗವನ್ನು ತೋರಿಸಿದ ಮೇರೆಗೆ ಮದ್ಯಾಹ್ನ ೩.೪೫ ರಿಂದ ೪.೧೦ ರವರೆಗೆ ಮಹಜರ್ ಕ್ರಮ

ಜರುಗಿಸಿದ್ದು, ನಂತರ ದಿನಾಂಕ ೦೭.೧೦.೨೦೨೫ ರಂದು ಮಹಜರ್ ಕ್ರಮ ಜರುಗಿಸಿ ಕೆಎ.೧೬/ಇಎ.೫೪೮೦ ನೇ ವಾಹನವನ್ನು ಜಪ್ತುಪಡಿಸಿಕೊಂಡುದ್ದು, ಸದರಿ ಬೈಕನ್ನು ಚಾಸಾ.೬ ರವರಿಗೆ ಆರೋಪಿಯು ಮಾರಾಟ ಮಾಡಿದ್ದನೆಂದು, ಚಾಸಾ.೬ ರವರು ಬೈಕನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ.

13. ಮಹಜರ್ ಸಾಕ್ಷಿದಾರರಾದ ಪ್ರಾಸಾ.೪ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೦೫.೧೦.೨೦೨೫ ರಂದು ಸರ್ಕಾರಿ ಬಸ್ ನಿಲ್ದಾಣದ ಹತ್ತಿರ ಚಾಸಾ.೧ ರವರ ಬೈಕ್ ಕಳ್ಳತನವಾದ ವಿಚಾರದಲ್ಲಿ ಪೋಲೀಸರು ಮದ್ಯಾಹ್ನ ೧.೦೦ ರಿಂದ ೧.೩೦ ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದು ನುಡಿಯುತ್ತಾರೆ.

14. ಪೋಲಿಸ್ ಸಿಬ್ಬಂಧಿಯಾದ ಪ್ರಾಸಾ.೫ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೦೪.೧೦.೨೦೨೫ ರಂದು ನೆಹರು ವೃತ್ತದಿಂದ ರಹೀಂ ನಗರ, ರಹೀಂ ನಗರದಿಂದ ನಾಯಕನಹಟ್ಟಿ ಕ್ರಾಸ್‌ನಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ, ಮೋಟಾರ್ ಸೈಕಲ್‌ನಲ್ಲಿದ್ದ ಒಬ್ಬ ಆಸಾಮಿ ತನ್ನನ್ನು ನೋಡಿ ಮರೆ ಮಾಚಿಕೊಳ್ಳಲು ಪ್ರಯತ್ನಿಸಿದ್ದು, ಆತನನ್ನು ವಿಚಾರಿಸಿದಾಗ ಸರಿಯಾದ ಮಾಹಿತಿ ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ಆಸಾಮಿಯ ಬಳಿ ಇದ್ದ ಕೆಎ.೧೬/ಇ.ಕೆ.೭೬೯೦ ನೇ ಮೋಟಾರ್ ಬೈಕ್‌ನ ದಾಖಲೆಗಳನ್ನು ಕೇಳಿದಾಗ, ಮಾರನೆ ದಿನ ಹಾಜರುಪಡಿಸುವುದಾಗಿ ಹೇಳಿದ್ದು, ಆತನನ್ನು ಚಾಸಾ.೧೧ ರವರ ಸಮ್ಮುಖ ಹಾಜುರಪಡಿಸಿರುವುದಾಗಿ ನುಡಿಯುತ್ತಾರೆ. ಸಾಕ್ಷಿಯು ದಿನಾಂಕ ೦೫.೧೦.೨೦೨೫ ರಂದು ಚಾಸಾ.೧೧ ರವರು ಆರೋಪಿ ಬಳಿ ಇದ್ದ ಕೆಎ.೧೬/ಇ.ಕೆ.೭೬೯೦ ನೇ ವಾಹನವು ಮೊಕದ್ದಮೆ ಸಂಖ್ಯೆ ೩೭೭/೨೦೨೫ ಕ್ಕೆ ಸಂಬಂಧಿಸಿದ್ದರಿಂದ ಸದರಿ ಆಸಾಮಿಯನ್ನು ಪತ್ತೆ ಮಾಡಿಕೊಂಡು ತನ್ನನ್ನು ನೇಮಿಸಿದ್ದು, ತಾನು ಆರೋಪಿಯನ್ನು ಬಳ್ಳಾರಿ ರಸ್ತೆಯ ಬಳಿ ಹಿಡಿದು ಚಾಸಾ.೧೨ ರವರ ಮುಂದೆ ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ.

15. ತನಿಖಾಧಿಕಾರಿಯಾದ ಪ್ರಾಸಾ.೬ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೦೪.೧೦.೨೦೨೫ ರಂದು ಮದ್ಯಾಹ್ನ ೨.೩೦ ಗಂಟೆಗೆ ಚಾಸಾ.೧ ರವರಿಂದ ದೂರನ್ನು ಸ್ವೀಕರಿಸಿ, ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿ, ದಿನಾಂಕ ೦೫.೧೦.೨೦೨೬ ರಂದು ಚಳ್ಳಕೆರೆ ಪಟ್ಟಣದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಮದ್ಯಾಹ್ನ ೧.೦೦ ರಿಂದ ೧.೩೦ ರವರೆಗೆ ಮಹಜರ್ ಕ್ರಮ ಜರುಗಿಸಿರುವುದಾಗಿ ನುಡಿದಿರುತ್ತಾರೆ.

16. ತನಿಖಾಧಿಕಾರಿಯಾದ ಪ್ರಾಸಾ.೭ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೦೫.೧೦.೨೦೨೫ ರಂದು ಆರೋಪಿಯು ಕೆಎ.೧೬/ಇ.ಎ.೫೪೮೦ ನೇ ಬೈಕನ್ನು ಕಳವು

ಮಾಡಿದ್ದಾಗ ಒಪ್ಪಿಕೊಂಡಿದ್ದರಿಂದ, ಅದೇ ದಿನ ಚಳ್ಳಕೆರೆ ಆರೋಪಿಯು ತೋರಿಸಿದ ಸ್ಥಳದಲ್ಲಿ ಸಂಜೆ ೩.೪೫ ರಿಂದ ೪.೧೦ ರವರೆಗೆ ಮಹಜರ್ ಕ್ರಮ ಜರುಗಿಸಿರುವುದಾಗಿ ನುಡಿಯುತ್ತಾರೆ. ಸಾಕ್ಷಿಯು ದಿನಾಂಕ ೦೬.೧೦.೨೦೨೫ ರಂದು ಆರೋಪಿಯಿಂದ ಕಳವು ಮಾಡಿದ ಬೈಕನ್ನು ಖರೀದಿಸಿದ್ದ ಚಾಸಾ.೬ ರವರಿಗೆ ಬೈಕನ್ನು ಹಾಜರುಪಡಿಸಲು ನೋಟೀಸ್ ನೀಡಿ, ಅದೇ ದಿನ ಚಾಸಾ.೬ ರವರು ಹಾಜರುಪಡಿಸಿದ ಕೆಎ.೧೬/ಇ.ಎ.೫೪೮೦ ನೇ ಬೈಕನ್ನು ಆರೋಪಿತನ ಸಮಕ್ಷಮ ಬೆಳಿಗ್ಗೆ ೩.೦೦ ರಿಂದ ೩.೨೦ ರವರೆಗೆ ಪಂಚನಾಮೆ ಜರುಗಿಸಿ ಅಮಾನತ್ತುಪಡಿಸಿಕೊಂಡು, ಚಾಸಾ.೧, ೮ & ೯ ರವರ ಹೇಳಿಕೆ ಪಡೆದು, ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ನುಡಿಯುತ್ತಾರೆ.

17. ಸಾಂದರ್ಭಿಕ ಮತ್ತು ಮಹಜರ್ ಸಾಕ್ಷಿದಾರರಾದ ಪ್ರಾಸಾ.೮ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೦೫.೧೦.೨೦೨೫ ರಂದು ಐ.ಸ್ಮಾರ್ಟ್ ಬೈಕನ್ನು ತಂದು ಪೋಲೀಸರ ಮುಂದೆ ಹಾಜರುಪಡಿಸಿದ್ದು, ಸದರಿ ಬೈಕನ್ನು ೯ನೇ ತಿಂಗಳಿನಲ್ಲಿ ಆರೋಪಿಯು ಅವರ ಮನೆಯವರಿಗೆ ಹುಷಾರಿಲ್ಲದ ಕಾರಣ ಬೈಕನ್ನು ತನಗೆ ನೀಡಿ, ರೂ.೮,೦೦೦/- ಹಣವನ್ನು ಪಡೆದು, ೩ ದಿನದ ನಂತರ ಬಿಡಿಸಿಕೊಂಡು ಹೋಗುವುದಾಗಿ ಹೇಳಿ ಹೋಗಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿಯು ಪೋಲೀಸರು ತನ್ನ ಸಮಕ್ಷಮ ಮಹಜರ್ ಮಾಡಿ ಬೈಕನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

18. ದೂರುದಾರರು ಯಾರೋ ಚಾಸಾ.೧ ರವರ ವಾಹನವನ್ನು ಕಳವು ಮಾಡಿರುತ್ತಾರೆ ಎಂದು ಹೇಳಿದ್ದು, ಆರೋಪಿಯೇ ವಾಹನವನ್ನು ಕಳವು ಮಾಡಿದ್ದ ಎಂಬುದಾಗಿ ಸ್ಪಷ್ಟವಾಗಿ ಹೇಳಿಲ್ಲ. ಅಭಿಯೋಜನೆ ಪರ ವಿಚಾರಣೆಗೆ ಒಳಪಡಿಸಿರುವ ಸಾಕ್ಷಿದಾರರು ಘಟನೆ ಬಗ್ಗೆ ಪ್ರತ್ಯಕ್ಷ ಸಾಕ್ಷಿದಾರರಾಗಿರುವುದಿಲ್ಲ. ಆರೋಪಿಯೇ ಕಳ್ಳತನ ಮಾಡಿರುತ್ತಾರೆ ಎಂಬುದನ್ನು ಸೂಚಿಸುವ ಯಾವುದೇ ನೇರ ಅಥವಾ ಪರೋಕ್ಷ ಸಾಕ್ಷ್ಯ ಲಭ್ಯವಿಲ್ಲ. ಪ್ರಾಸಾ.೧ ರವರು ಪೋಲೀಸರು ನೀಡಿದ ಮಾಹಿತಿ ಮೇರೆಗೆ ಆರೋಪಿಯೇ ಕಳ್ಳ ಎಂಬ ವಿಚಾರ ಗೊತ್ತಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅಪರಾಧ ನ್ಯಾಯ ಶಾಸ್ತ್ರದ ಸ್ಥಿರ ತತ್ವದ ಪ್ರಕಾರ ಅಪರಾದ ನಡೆದಿರುವುದು ಮತ್ತು ಅಪರಾದಿಯನ್ನು ಸಾಬೀತುಪಡಿಸುವುದು ಎರಡು ವಿಭಿನ್ನ ಅಂಶಗಳಾಗಿವೆ. ಕೇವಲ ಅಪರಾಧ ನಡೆದಿದೆ ಎಂಬ ಕಾರಣಕ್ಕೆ ಆರೋಪಿಯನ್ನು ದೋಷಿಯಾಗಿರಿಸಲಾಗುವುದಿಲ್ಲ.

19. ಪ್ರಸ್ತುತ ಪ್ರಕರಣದಲ್ಲಿ ಘಟನೆ ನಡೆದ ೨ ತಿಂಗಳು ೧೫ ದಿನಗಳ ನಂತರ ದೂರು ದಾಖಲಿಸಲಾಗಿರುತ್ತದೆ. ಈ ವಿಳಂಬಕ್ಕೆ ಯಾವುದೇ ಸಮಂಜಸವಾದ ಕಾರಣವನ್ನು

ಅಭಿಯೋಜನೆಯವರು ವಿವರಿಸಿಲ್ಲ. ಕಳ್ಳತನದಂತಹ ಪ್ರಕರಣಗಳಲ್ಲಿ ತಕ್ಷಣದ ದೂರು ಅತ್ಯಂತ ಮಹತ್ವದ್ದಾಗಿದೆ. ವಿಳಂಬವು ಅಭಿಯೋಜನೆ ಕಥನದ ಮೇಲೆ ಸಂಶಯವನ್ನು ಉಂಟುಮಾಡುತ್ತದೆ.

20. ಕಳ್ಳತನ ಪ್ರಕರಣದಲ್ಲಿ ಮೊಟ್ಟಮೊದಲ ಬಾರಿಗೆ ಅಭಿಯೋಜನೆಯವರು ಆರೋಪಿಯ ವಶದಿಂದ ಕಳವು ಮಾಲನ್ನು ಜಪ್ತಿಪಡಿಸಿಕೊಂಡಿರುವುದನ್ನು ಸಾಬೀತುಪಡಿಸಬೇಕಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಮಾನತ್ತು ಪಂಚನಾಮೆ ಪಂಚಸಾಕ್ಷಿದಾರರಾದ ಪ್ರಾಸಾ.೨ ಮತ್ತು ೩ ರವರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಚಾಸಾ.೬ ರವರು ಆರೋಪಿಯಿಂದ ಬೈಕನ್ನು ಖರೀದಿಸಿದ್ದು, ಚಾಸಾ.೬ ರವರು ಹಾಜರುಪಡಿಸಿದ ಬೈಕನ್ನು ಜಪ್ತುಪಡಿಸಿಕೊಂಡಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಪ್ರಾಸಾ.೩ ರವರು ತಮ್ಮ ಪಾಟೀಸವಾಲಿನಲ್ಲಿ "ಜಪ್ತುಪಡಿಸಿಕೊಂಡ ವಾಹನ ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ. ಸದರಿ ವಾಹನದ ನೊಂದಣೀ ಸಂಖ್ಯೆ ಹೇಳಲು ಆಗುವುದಿಲ್ಲ. ಠಾಣೆಯಲ್ಲಿ ಯಾರು ಬೈಕನ್ನು ತಂದು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಠಾಣೆಗೆ ಬರುವಷ್ಟರಲ್ಲಿ ಬೈಕನ್ನು ನಿಲ್ಲಿಸಲಾಗಿತ್ತು ಎಂದರೆ ಸರಿ. ಬೈಕನ್ನು ಯಾರಿಗೆ ಮಾರಾಟ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.೫ ಮತ್ತು ೬ ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ" ಎಂದು ನುಡಿದಿರುತ್ತಾರೆ. ಹಾಗೂ ಪ್ರಾಸಾ.೨ ರವರು ತಮ್ಮ ಪಾಟೀಸವಾಲಿನಲ್ಲಿ "ಜಪ್ತುಪಡಿಸಿಕೊಂಡ ವಾಹನದ ನೊಂದಣಿ ಸಂಖ್ಯೆ ಹಾಗೂ ಬಣ್ಣವನ್ನು ಹೇಳಲು ಆಗುವುದಿಲ್ಲ. ಸ್ಥಳ ಪಂಚನಾಮೆಯನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಜರುತಿಸಲಾಯಿತು ಎಂದು ಹೇಳಲು ಆಗುವುದಿಲ್ಲ. ನಿಪಿ.೫ ಮತ್ತು ೬ ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಯಾರು ಠಾಣೆಯಲ್ಲಿ ವಾಹನ ನಿಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ" ಎಂದು ನುಡಿಯುತ್ತಾರೆ. ಆದ್ದರಿಂದ ಚಾಸಾ.೬ ರವರು ಪ್ರಾಸಾ.೨ ಮತ್ತು ೩ ರವರ ಸಮಕ್ಷಮ ಕಳ್ಳತನ ಮಾಡಿದ ಬೈಕನ್ನು ಹಾಜರುಪಡಿಸಿದ ಬಗ್ಗೆ ಸಂಶಯ ಉದ್ಭವವಾಗುತ್ತದೆ.

21. ಪ್ರಮುಖವಾಗಿ ದಾಖಲೆಗಳ ಹಾಗೂ ಸಾಕ್ಷ್ಯಗಳ ಸಮಗ್ರ ಪರಿಶೀಲನೆಯ ಮೇರೆಗೆ ಆರೋಪಿಯು ಕಳವು ಮಾಡಿದ ಬೈಕನ್ನು ಗಿರವಿ ಇಟ್ಟಿದ್ದಾನೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಪ್ರಮುಖ ಸಾಕ್ಷಿಯಾದ ಚಾಸಾ.೬ ರವರ ಹೇಳಿಕೆಗಳಲ್ಲಿ ಗಂಬೀರ ವೈಷಮ್ಯಗಳು ಕಂಡುಬರುತ್ತವೆ.

22. ತನಿಖಾಧಿಕಾರಿಗಳ ಮುಂದೆ ನೀಡಿದ ಹೇಳಿಕೆಯಲ್ಲಿ ಆರೋಪಿಯು ಕಳವು ಮಾಡಿದ ಬೈಕನ್ನು ಬೇಡರೆಡ್ಡಿಹಳ್ಳಿ ಗ್ರಾಮದಲ್ಲಿ ರೂ.೧೦,೦೦೦/– ಕ್ಕೆ ಗಿರವಿ ಇಟ್ಟಿದ್ದಾನೆ ಎಂದು ಹೇಳಿದ್ದಾರೆ. ಆದರೆ, ತಮ್ಮ ನ್ಯಾಯಾಲಯದ ಮುಂದಿನ ಸಾಕ್ಷಿ ವಿಚಾರಣೆಯಲ್ಲಿ ಗಿರವಿ ಮೊತ್ತ ರೂ.೮,೦೦೦/– ಎಂದು ಹೇಳಿ, ಗಿರವಿ ವ್ಯವಹಾರವು ಬೇಡರೆಡ್ಡಿಹಳ್ಳಿಯಲ್ಲಿ ನಡೆದಿರುವುದನ್ನು

ನಿರಾಕರಿಸಿದ್ದಾರೆ. ಚಾಸಾ.೬ ರವರು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ.೧೦ ಎಂದು ಗುರುತಿಸಲಾಗಿರುತ್ತದೆ. ಈ ರೀತಿಯ ಮೊತ್ತ ಹಾಗೂ ಸ್ಥಳಕ್ಕೆ ಸಂಬಂಧಿಸಿದ ಪ್ರಮುಖ ವೈಷಮ್ಯಗಳು ಅಭಿಯೋಗದ ಪ್ರಕರಣದ ಮೂಲಭೂತ ಅಂಶಗಳನ್ನು ಸಂಶಯಾಸ್ಪದವಾಗಿಸುತ್ತದೆ ಮತ್ತು ಚಾಸಾ.೬ ರವರ ಸಾಕ್ಷ್ಯದ ನಂಬಿಕೆಯನ್ನು ಹಾನಿಗೊಳಿಸುತ್ತದೆ. ಈ ವೈಷಮ್ಯಗಳನ್ನು ಸಮರ್ಥಿಸುವಂತಹ ಯಾವುದೇ ಸ್ವತಂತ್ರಪೂರಕ ಸಾಕ್ಷ್ಯವನ್ನು ಅಭಿಯೋಗವು ಮಂಡಿಸಿರುವುದಿಲ್ಲ. ಆದ್ದರಿಂದ, ಚಾಸಾ.೬ ರವರ ಸಾಕ್ಷ್ಯವನ್ನು ಸಂಪೂರ್ಣವಾಗಿ ನಂಬಲಾರದಂತಾಗಿದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ. ಹೀಗಾಗಿ ಈ ಅಂಶವನ್ನು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಲು ವಿಫಲವಾಗಿದೆ.

23. ಆರೋಪಿಯು ತನಿಖಾಧಿಕಾರಿಗಳ ಮುಂದೆ ನೀಡಿದ ತಪ್ಪೊಪ್ಪಿಗೆಯ ಆಧಾರದ ಮೇಲೆ ಆರೋಪಿಯ ವಿರುದ್ಧ ದೋಷಾರೋಪಣೆಯನ್ನು ಸಲ್ಲಿಸಲಾಗಿರುತ್ತದೆ. ಆರೋಪಿಯು ತನಿಖಾಧಿಕಾರಿಗಳ ಮುಂದೆ ನೀಡಿದ ತಪ್ಪೊಪ್ಪಿಗೆ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ ೨೫ ಮತ್ತು ೨೬ ರ ಪ್ರಕಾರ ಕಾನೂನುಬದ್ಧ ಸಾಕ್ಷ್ಯವಾಗದ ಕಾರಣ, ಅದನ್ನು ಆರೋಪಿಯ ದೋಷವನ್ನು ನಿರ್ಣಯಿಸಲು ಬಳಸಲಾಗುವುದಿಲ್ಲ. ಇದಲ್ಲದೆ, ಕಲಂ ೨೭ ರ ಅಡಿಯಲ್ಲಿ ಹೇಳಿಕೆಯ ಆಧಾರದಲ್ಲಿ ಆರೋಪಿಯು ವಾಹನವನ್ನು ಕಳವು ಮಾಡಲು ಉಪಯೋಗಿಸಿದ ಬೈಕ್ ಕೀ ಪತ್ತೆಯಾಗಿರುವುದಾಗಿ ಈ ಪ್ರಕರಣದಲ್ಲಿ ದಾಖಲೆ ಇಲ್ಲ. ಆರೋಪಿಯು ತನಿಖೆಯ ಸಮಯದಲ್ಲಿ ಸ್ಥಳವನ್ನು ತೋರಿಸಿದ್ದಾರೆ ಎಂಬುದರ ಆಧಾರದಲ್ಲಿ ಅಪರಾಧ ಸಾಬೀತಾಗುವುದಿಲ್ಲ. ಅತ್ಯಂತ ಪ್ರಮುಖವಾಗಿ, ವಾಹನವನ್ನು ಚಾಲನೆ ಮಾಡಲು ಉಪಯೋಗಿಸಿದ ಯಾವುದೇ ಸಾಧನವನ್ನು ಈ ಪ್ರಕರಣದಲ್ಲಿ ಜಪ್ತಿ ಮಾಡಲಾಗಿದೆ ಎಂಬುದಾಗಿ ಮಹಜರ್ ಸಾಕ್ಷಿಗಳಾಗಲೀ ಅಥವಾ ತನಿಖಾಧಿಕಾರಿಯಾಗಲಿ ಯಾವುದೇ ಸಾಕ್ಷಿಯನ್ನು ನೀಡಿಲ್ಲ. ಆರೋಪಿಯು ಯಾವ ರೀತಿಯಲ್ಲಿ ವಾಹನವನ್ನು ಕಳವು ಮಾಡಿದನು ಹಾಗೂ ಯಾವ ಸಾಧನವನ್ನು ಬಳಸಿಕೊಂಡು ಬೈಕನ್ನು ಚಾಲನೆಗೆ ತಂದನು ಎಂಬುದರ ಕುರಿತು ಅಭಿಯೋಜನೆಯ ಪಕ್ಷವು ಯಾವುದೇ ಸ್ಪಷ್ಟ ಹಾಗೂ ನಂಬಲರ್ಹ ಸಾಕ್ಷ್ಯವನ್ನು ನೀಡಿಲ್ಲ. ಈ ಸಂಬಂಧ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದು ಸಾಬೀತಾಗಿಲ್ಲ. ಇದರಿಂದ ಆರೋಪಿಯ ವಿರುದ್ಧದ ಆರೋಪವನ್ನು ದೃಢಪಡಿಸುವ ಪ್ರಮುಖ ಅಂಶಗಳನ್ನು ಅಭಿಯೋಜನೆಯವರು ಸಾಬೀತುಪಡಿಸಲು ವಿಫಲವಾಗಿದೆ. ಈ ಕೊರತೆ ಪ್ರಕರಣದ ಮೂಲಭೂತ ಸ್ವರೂಪದ ಮೇಲೆಯೇ ಗಂಬೀರ ಸಂಶಯವನ್ನು ಉಂಟುಮಾಡುತ್ತದೆ. ಹಾಗಾಗಿ ಅಭಿಯೋಜನೆಯ ಪ್ರಕರಣದ ಮೇಲೆ ಸಂಶಯ ಉದ್ಭವವಾಗುತ್ತದೆ. ಹಾಗೂ ಅಭಿಯೋಜನೆಯ ಪ್ರಕರಣವು ಸಂಪೂರ್ಣವಾಗಿ ಅಪೂರ್ಣ ಸಾಂದರ್ಬಿಕ ಸಾಕ್ಷ್ಯಗಳ ಮೇಲೆ ನಿಂತಿದೆ. ಈ ಎಲ್ಲಾ ಅಂಶಗಳನ್ನು

ಪರಿಗಣಿಸಿದಾಗ, ಅಭಿಯೋಜನೆಯು ಆರೋಪಿಯ ವಿರುದ್ಧದ ಆರೋಪವನ್ನು ಸಂದೇಹಾತೀತವಾಗಿ ಸಾಬೀತುಪಡಿಸಲು ವಿಫಲವಾಗಿದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ. ಅಪರಾಧಿಕ ತತ್ವಗಳ ಪ್ರಕಾರ ಅಪರಾಧಿಕ ಪ್ರಕರಣಗಳಲ್ಲಿ ಅಭಿಯೋಜನೆಯ ಪ್ರಕರಣಗಳ ಮೇಲೆ ಸಂಶಯ ಉದ್ಭವಿಸಿದರೆ ಸದರಿ ಸಂಶಯದ ಲಾಭ ಆರೋಪಿತರಿಗೆ ನೀಡಬೇಕೆಂದು ಇರುತ್ತದೆ. ಈ ಕಾರಣಗಳಿಂದಾಗಿ ಅಂಶ ೧ ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

24. ಅಂಶ ನಂ.೨– ಮೇಲೆ ಮಾಡಲಾದ ವಿವರವಾದ ಚರ್ಚೆ ಹಾಗೂ ಕಾರಣಗಳಿಂದ ಈ ಕೆಳಕಂಡಂತೆ ನ್ಯಾಯಾಲಯವು ಆದೇಶ ಮಾಡಿರುತ್ತದೆ:–

**ಆ ದೇ ಶ**

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ ೨೭೧(೧) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ನ್ಯಾಯ ಸಂಹಿತೆ ಕಲಂ ೩೦೩(೨) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಂದ ಬಿಡುಗಡೆಗೊಳಿಸಲಾಗಿದೆ.

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ ೪೮೧(೧) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆಯು ೬ ತಿಂಗಳವರೆಗೆ ಚಾಲ್ತಿಯಲ್ಲಿರತಕ್ಕದ್ದು ಎಂದು ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಬೆರಳಚ್ಚುಪಡಿಸಿದ ನಂತರ, ತಿದ್ದುಪಡಿ ಮಾಡಿ, ಸಹಿ ಮಾಡಿ ಇಂದು ಅಂದರೆ ದಿನಾಂಕ: 02 ನೇ ಏಪ್ರಿಲ್ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ಹೇಮಾ ಹೆಚ್.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.

**ಅನುಬಂಧ**

1) ಅಭಿಯೋಜನಾ ಪಕ್ಷದ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು :–

| | | |
|---|---|---|
| ಪ್ರಾಸಾ.1 | : | ವೆಂಕಟೇಶ |
| ಪ್ರಾಸಾ.2 | : | ಮೋಹನ್ |
| ಪ್ರಾಸಾ.3 | : | ಅಕ್ಬರ್ |
| ಪ್ರಾಸಾ.4 | : | ಪಾಲಯ್ಯ |
| ಪ್ರಾಸಾ.5 | : | ಶ್ರೀಧರ್ ವಸಂತ ಧರಣ್ಯನವರ್ |

| | | |
|---|---|---|
| ಪ್ರಾಸಾ.6 | : | ಬಿ.ನಾಗೇಂದ್ರಪ್ಪ |
| ಪ್ರಾಸಾ.7 | : | ಈರೇಶ್ |
| ಪ್ರಾಸಾ.8 | : | ಮಹೇಶ |

2) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ದಾಖಲಾತಿಗಳುಃ-

| | |
|---|---|
| ನಿಪಿ.1 | : ದೂರು |
| ನಿಪಿ.1(ಎ ಮತ್ತು ಬಿ) | : ಸಾಕ್ಷಿ ಸಹಿ |
| ನಿಪಿ.2 | : ಸ್ಥಳ ಪಂಚನಾಮೆ |
| ನಿಪಿ.2(ಎ ರಿಂದ ಸಿ) | : ಸಾಕ್ಷಿ ಸಹಿ |
| ನಿಪಿ.3 & 4 | : ಭಾವಚಿತ್ರ |
| ನಿಪಿ.5 | : ಸ್ಥಳ ಪಂಚನಾಮೆ |
| ನಿಪಿ.5(ಎ ರಿಂದ ಸಿ) | : ಸಾಕ್ಷಿ ಸಹಿ |
| ನಿಪಿ.6 | : ಅಮಾನತು ಪಂಚನಾಮೆ |
| ನಿಪಿ.6(ಎ ರಿಂದ ಡಿ) | : ಸಾಕ್ಷಿ ಸಹಿ |
| ನಿಪಿ.7 | : ಪ್ರಥಮ ವರ್ತಮಾನ ವರದಿ |
| ನಿಪಿ.7(ಎ) | : ಸಾಕ್ಷಿ ಸಹಿ |
| ನಿಪಿ.8 | : ಬಿ.ಎಸ್.ಎ. ಕಲಂ 63(4) ರಡಿಯ ಪ್ರಮಾಣ ಪತ್ರ |
| ನಿಪಿ.8(ಎ) | : ಸಾಕ್ಷಿ ಸಹಿ |
| ನಿಪಿ.9 | : ಸಿ.ಡಿ. |

3) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ಮುದ್ದೆಮಾಲುಃ

-ಃ ಇಲ್ಲಾ ಃ-

4) ಆರೋಪಿ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು ಮತ್ತು ಗುರುತಿಸಲಾಗಿದ ದಾಖಲಾತಿಗಳ

-ಃ ಇಲ್ಲಾ ಃ-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.